( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.101/2013

ದಿನಾಂಕಃ 25-06-2024, ಪಿ ಡಬ್ಲ್ಯೂ—1

ಪಾಟೀ ಸವಾಲು ಃ ಶ್ರೀ ಆರ್ ಕೆ ಎಂ ವಕೀಲರಿಂದಃ

ನನ್ನ ಚಿಕ್ಕ ತಾತನ ಹೆಸರು ರಾಮೇಗೌಡ ಎಂದರೆ ಸರಿ. ಅವರ ಹೆಂಡತಿಯ ಹೆಸರು ಲಕ್ಷ್ಮಮ್ಮ. ಲಕ್ಷ್ಮಮ್ಮ ನವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಗಂಡು ಮಕ್ಕಳ ಪೈಕಿ ಜನಾರ್ಧನ, ಸುರೇಶ, ದಿನೇಶ ಮತ್ತು ಹೆಣ್ಣು ಮಗಳ ಪೈಕಿ ಮಂಗಳ ಎಂದರೆ ಸರಿ. ರಾಮೇಗೌಡರು ಸುಮಾರು 40-50 ವರ್ಷಗಳಿಂದ ಹೆಂಡತಿ ಮಕ್ಕಳೊಂದಿಗೆ ಚನ್ನರಾಯಪಟ್ಟಣದಲ್ಲಿ ವಾಸಮಾಡುತ್ತಿದ್ದರು ಎಂದರೆ ಸರಿ. ನನ್ನ ತಾತ ಬದುಕಿದ್ದಾಗ ನನ್ನ ತಾತ, ನನ್ನ ತಂದೆ, ನನ್ನ ಚಿಕ್ಕ ತಾತ, ನನ್ನ ಚಿಕ್ಕಪ್ಪ ರವರುಗಳು ಬದುಕಿದ್ದಾಗ ಪಾಲುಪಟ್ಟಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುಪಟ್ಟಿ ಮಾಡಿಕೊಳ್ಳುವಾಗ ನನ್ನ ತಾತ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕ ತಾತನಿಗೆ ಹೋದಂತಹ ಎಲ್ಲಾ ಆಸ್ತಿಗಳನ್ನು ನನ್ನ ಚಿಕ್ಕ ಅಜ್ಜಿ ಲಕ್ಷಮ್ಮ ನವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಚಿಕ್ಕ ತಾತನ ಆಸ್ತಿಗಳನ್ನು ನನ್ನ ಚಿಕ್ಕ ಅಜ್ಜಿ ನೋಡಿಕೊಳ್ಳುತ್ತಿದ್ದರಿಂದ ಪಾಲುಪಟ್ಟಿಯಲ್ಲಿ ನನ್ನ ಚಿಕ್ಕ ತಾತನ ಹೆಸರಿನ ಬದಲಾಗಿ ನನ್ನ ಚಿಕ್ಕ ಅಜ್ಜಿಯ ಹೆಸರನ್ನು ನಮೂದು ಮಾಡಿ ಆಸ್ತಿಗಳನ್ನು ಅವರ ಸ್ವಾಧೀನಕ್ಕೆ ಕೊಡಲಾಗಿತ್ತು ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ರಲ್ಲಿ ನಮೂದು ಮಾಡಿರುವ ರಾಮೇಗೌಡರ ಹೆಂಡತಿ ಲಕ್ಷಮ್ಮ ಎಂದರೆ ನನ್ನ ಚಿಕ್ಕ ಅಜ್ಜಿ ಎಂದರೆ ಸರಿ. ಹಾಗೆಯೇ ಕೆಂಪೇಗೌಡ ಬಿನ್ ಬೆಟ್ಟೇಗೌಡ ನನ್ನ ತಾತ ಎಂದರೆ ಸರಿ. ನಿಪಿ-2 ರ ಪ್ರಕಾರ ನನ್ನ ಚಿಕ್ಕ ಅಜ್ಜಿಗೆ 1 ಎಕರೆ 39 ಗುಂಟೆ ಮತ್ತು ನನ್ನ ತಾತನಿಗೆ 2 ಎಕರೆ 30 ಗುಂಟೆ ಜಮೀನು ಹಿಸ್ಸೆ ಹೋಗಿದೆ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ನನ್ನ ಚಿಕ್ಕ ಅಜ್ಜಿಗೆ 1 ಎಕರೆ ಜಮೀನು ಹಿಸ್ಸೆ ಹೋಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ ನನ್ನ ಚಿಕ್ಕತಾತ ಮತ್ತು ಚಿಕ್ಕ ಅಜ್ಜಿಯ ವಿರುದ್ಧ ಸಲ್ಲಿಸಿದ್ದ ದಾವೆಯಲ್ಲಿ ಹಾಗೂ ನನ್ನ ತಾತ ನನ್ನ ತಂದೆಯ ವಿರುದ್ಧ ಸಲ್ಲಿಸಿದ್ದ ದಾವೆಯ ವಿಚಾರಗಳನ್ನು ತಿಳಿದು, ದಾವೆಯಲ್ಲಿ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ನನ್ನ ತಂದೆ ತೀರಿಹೋಗಿ 3 ವರ್ಷಗಳಾಗಿವೆ. ನನ್ನ ತಂದೆ

ಮೃತರಾಗುವವರೆಗೂ ನಾನು ಮತ್ತು ನನ್ನ ತಂದೆ ಚೆನ್ನಾಗಿದ್ದೆವು. ನನ್ನ ತಂದೆ ಮೃತರಾಗುವ ತನಕ ಅವರನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ನನ್ನ ತಂದೆಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

ಈ ದಾವೆಯನ್ನು ಹೂಡಿದ ನಂತರ ನನ್ನ ತಂದೆ ನನ್ನ ಜೊತೆ ಇದ್ದರು ಎಂದರೆ ಸರಿ. ನನ್ನ ತಂದೆ ಹೇಳಿದ್ದರಿಂದ ಈ ದಾವೆಯನ್ನು ನಾನು ಹೂಡಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಜೊತೆ ಚೆನ್ನಾಗಿ ಇಲ್ಲದೇ ಇದ್ದಾಗ ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ. ನನ್ನ ತಂದೆ ಅವರ ಸ್ವಂತ ಮನೆಯಲ್ಲಿ ವಾಸವಿದ್ದರು. ಈ ವಿಚಾರಗಳನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಸರ್ವೆ ನಂ.52/2 ರಲ್ಲಿ 1 ಎಕರೆ 39 ಗುಂಟೆ ಪೈಕಿ 39 ವರೆ ಗುಂಟೆಯನ್ನು 8ನೇ ಪ್ರತಿವಾದಿ ಮಾಡುತ್ತಿದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ ತಾತನ ಆಸ್ತಿಯನ್ನು ಮೋಸದಿಂದ ಮಾಡಿಸಿಕೊಟ್ಟಿದ್ದಾರೆ. ಸರ್ವೆ ನಂ.51/6 ರಲ್ಲಿ 1 ಎಕರೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು 8 ನೇ ಪ್ರತಿವಾದಿ ಮಾಡುತ್ತಿದ್ದಾರೆ. ಸರ್ವೆ ನಂ.52/2 ರಲ್ಲಿ 1 ಎಕರೆ 39 ಗುಂಟೆ ಪೈಕಿ 39 ವರೆ ಗುಂಟೆಯನ್ನು 9 ನೇ ಪ್ರತಿವಾದಿ ಮಾಡುತ್ತಿದ್ದಾರೆ ಎಂದರೆ ಸರಿ. ಸರ್ವೆ ನಂ.51/6 ರಲ್ಲಿ 1 ಎಕರೆ ಜಮೀನಿನ ಪೈಕಿ 20 ಗುಂಟೆಯನ್ನು 9 ನೇ ಪ್ರತಿವಾದಿ ಮಾಡುತ್ತಿದ್ದಾರೆ ಎಂದರೆ ಸರಿ. 8 ಮತ್ತು 9 ನೇ ಪ್ರತಿವಾದಿಯರು ಸ್ವಾದೀನದಲ್ಲಿರುವ ಜಮೀನಿನಲ್ಲಿ 8 ಮತ್ತು 9 ನೇ ಪ್ರತಿವಾದಿರು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ.

2016 ರಲ್ಲಿ ನನ್ನ ಚಿಕ್ಕ ಅಜ್ಜಿ ಮತ್ತು ಅವರ ಮಕ್ಕಳು ದಾವಾ ಆಸ್ತಿಗಳ ಪೈಕಿ ಐಟಂ ನಂ.1 ಮತ್ತು ಐಟಂ ನಂ. 2 ರಲ್ಲಿ 4 ಎಕರೆ 29 ಗುಂಟೆ ಪೈಕಿ 1 ಎಕರೆ 39 ಗುಂಟೆ ಜಮೀನನ್ನು 8 ಮತ್ತು 9 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡುವ ಮುಂಚೆ ನನ್ನ ಚಿಕ್ಕ ಅಜ್ಜಿ ಮತ್ತು ಅವರ ಮಕ್ಕಳು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ತಾತ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 1 ಮತ್ತು 2 ರಲ್ಲಿ 4 ಎಕರೆ 29 ಗುಂಟೆ ಪೈಕಿ 1 ಎಕರೆ 39 ಗುಂಟೆ ಜಮೀನಿನ ಮೇಲೆ ನಮಗೆ ಯಾವುದೇ ಹಿಸ್ಸಾ ಹಕ್ಕಿಲ್ಲ ಮತ್ತು ಸದರಿ ಜಮೀನುಗಳು ನನ್ನ ಕುಟುಂಬಕ್ಕೆ ಸಂಬಂದಿಸಿಲ್ಲ ಹಾಗೂ ಸದರಿ ಜಮೀನುಗಳನ್ನು ನಾನು ತಪ್ಪಾಗಿ ಸೇರಿಸಿ ಹಿಸ್ಸೆ ಕೋರುತ್ತಿದ್ದೇನೆ ಎಂದರೆ ಸರಿಯಲ್ಲ.

ಐಟಂ ನಂ.2 ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯ ಹಿಸ್ಸೆಗೆ ಹೋಗಿದ್ದ 2 ಎಕರೆ 39 ಗುಂಟೆ ಜಮೀನಿನ ಪೂರ್ವಕ್ಕೆ ಹನ್ಯಾಳು ರುದ್ರಪಟ್ಟಣ ಮುಖ್ಯ ರಸ್ತೆ, ಪಶ್ಚಿಮಕ್ಕೆ ಸರ್ಕಾರಿ ಮರಟಿ, ಉತ್ತರಕ್ಕೆ 8 ಮತ್ತು 9 ನೇ ಪ್ರತಿವಾದಿಯರ ಜಮೀನು, ದಕ್ಷಿಣಕ್ಕೆ ಶಮಿಉಲ್ಲಾ ಖಾನ್ ರವರ ಜಮೀನು ಇದೆ ಎಂದರೆ ಸರಿ.

8 ಮತ್ತು 9 ನೇ ಪ್ರತಿವಾದಿಯರು ಮಾಡುತ್ತಿರುವ 1 ಎಕರೆ 39 ಗುಂಟೆ ಜಮೀನಿನ ಪೂರ್ವಕ್ಕೆ ನಮ್ಮ ಬಾಬ್ತು 1 ಎಕರೆ ತೆಂಗಿನ ತೋಟ, ಪಶ್ಚಿಮಕ್ಕೆ ಸರ್ಕಾರಿ ಮರಟೆ, ಉತ್ತರಕ್ಕೆ ನರಸಿಂಹೇಗೌಡರ ಜಮೀನು, ದಕ್ಷಿಣಕ್ಕೆ ನನ್ನ ತಂದೆ ಮತ್ತು ಚಿಕ್ಕಪ್ಪನವರ ಹಿಸ್ಸೆಗೆ ಬಂದ ಜಮೀನು ಬರುತ್ತದೆ ಎಂದರೆ ಸರಿ.

ನನ್ನ ತಂದೆ ನನ್ನ ಚಿಕ್ಕ ತಾತ ಮತ್ತು ಚಿಕ್ಕ ಅಜ್ಜಿಯ ವಿರುದ್ಧ ಸಲ್ಲಿಸಿದ ದಾವೆ ವಜಾ ಆಗಿದ್ದರಿಂದ ನನ್ನ ತಂದೆ ನನಗೆ ಹೇಳಿ ಈ ದಾವೆಯನ್ನು ಹೂಡಿಸಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.1 ಮತ್ತು 2 ರಲ್ಲಿ 4 ಎಕರೆ 29 ಗುಂಟೆ ಪೈಕಿ 1 ಎಕರೆ 39 ಗುಂಟೆಗೆ ನನ್ನ ತಂದೆಗೆ ಯಾವುದೇ ಹಿಸ್ಸಾ ಹಕ್ಕಿಲ್ಲ ಎಂದು ಈ ಹಿಂದೆಯೇ ನ್ಯಾಯಾಲಯ ತೀರ್ಮಾನ ಮಾಡಿದೆ ಎಂದರೆ ಸರಿಯಲ್ಲ. ನನ್ನ ಚಿಕ್ಕ ತಾತ ಮತ್ತು ಚಿಕ್ಕ ಅಜ್ಜಿಯ ಹಿಸ್ಸೆಗೆ ಬಂದ ಜಮೀನನ್ನು ಅವರು 8 ಮತ್ತು 9 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದು 8 ಮತ್ತು 9 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**